ಉಪಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಇವುಗಳಿಗೆ ಮುಕ್ತನಿಧಿ ಅನುದಾನ ನೀಡಿದ್ದು ಸಾಂಕ್ರಾಮಿಕ ರೋಗ ತಡೆಗಟ್ಟಲು ಸಹ ಕ್ರಮ ಕೈಗೊಳ್ಳಲಾಗಿದೆ

ಆ) ಇದಕ್ಕೆಂದು ಪ್ರತ್ಯೇಕ ಹಣವನ್ನು ನಿಗದಿಪಡಿಸಿರುವುದಿಲ್ಲ ಈ ಕಾಯಿಲೆಗಳ ನಿವಾರಣೆಗಾಗಿ ಗ್ರಾಮಮಟ್ಟದಲ್ಲಿ ವಿವಿಧೋದ್ದೇಶ ಕಾರ್ಯಕರ್ತರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಉಪ ಕೇಂದ್ರಗಳಿಗೆ ತಲಾ 5 ಸಾವಿರದಂತೆ, ತಾಲ್ಲೂಕು ಆರೋಗ್ಯ ಕೇಂದ್ರಗಳಿಗೆ ತಲಾ 1 ಲಕ್ಷದಂತೆ ಔಷಧೇತರಕ್ಕೆ ನೀಡಲಾಗುತ್ತಿದೆ ಇಂತಹ ಸಾಂಕ್ರಾಮಿಕ ರೋಗಗಳು ಬಂದಾಗ ಔಷಧಿ ಹಾಗೂ ರಸಾಯನಿಕಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ 2006–07ನೇ ಸಾಲಿನಲ್ಲಿ ಚಿಕೂನ್ ಗುನ್ಯಾ ರೋಗವು ಸಾಂಕ್ರಾಮಿಕ ರೂಪ ತಾಳಿದ್ದು ಇದಕ್ಕಾಗಿ ವಿಶೇಷವಾಗಿ ರೂ 877 00 ಲಕ್ಷಗಳನ್ನು ಮೀಸಲಿಡಲಾಗಿತ್ತು

ಈ) ಚಿಕೂನ್ ಗುನ್ಯಾಕ್ಕೆ ಮೀಸಲಾಗಿಟ್ಟ ಮೊತ್ತದಲ್ಲಿ ರೂ 777 00 ಲಕ್ಷಗಳನ್ನು ಖರ್ಚು ಮಾಡಲಾಗಿದೆ

659 (970) ಶ್ರೀ ವೆಂಕಟಮುನಿಯಪ್ಪ ಬಿ ಪಿ (ಬೇತಮಂಗಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಮಂಜೂರಾದ 129 ವೈಯಕ್ತಿಕ ಕೊಳವೆ ಬಾವಿಗಳಲ್ಲಿ 49 ಹಾಗೂ 2006–07ನೇ ಸಾಲಿನಲ್ಲಿ ಮಂಜೂರಾದ 119 ವೈಯಕ್ತಿಕ ಕೊಳವೆ ಬಾವಿಗಳನ್ನು ಇನ್ನೂ ಕೊರೆಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಆರ್ಥಿಕ ವರ್ಷ ಅಂತ್ಯವಾಗುತ್ತಿದ್ದರೂ ಕೊಳವೆ ಬಾವಿಗಳನ್ನು ಕೊರೆಯಿಸದ ಇಲಾಖಾಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಇ) ಹಾಗಿದ್ದಲ್ಲಿ, ಮಂಜೂರಾಗಿರುವ ವೈಯಕ್ತಿಕ ಕೊಳವೆ ಬಾವಿಗಳನ್ನು ಕೊರೆಯಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) 2005–06ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಬೇತಮಂಗಲ ಕ್ಷೇತ್ರಕ್ಕೆ ನಿಗದಿಪಡಿಸಿದ ಗುರಿ ಈ ಕೆಳಕಂಡಂತಿವೆ

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
ಆಯವ್ಯಯದಲ್ಲಿ ನಿಗದಿಪಡಿಸದ ಗುರಿ –	113	06
ಹೆಚ್ಚುವರಿ ಗುರಿಯಲ್ಲಿ ಮಂಜೂರಾದ –	–	10
ಕೊಳವೆ ಬಾವಿಗಳ ಸಂಖ್ಯೆ		
ಒಟ್ಟು	**113**	**16**

ಮೇಲ್ಕಾಣಿಸಿದಂತೆ ಪರಿಶಿಷ್ಟ ಜಾತಿಗೆ 113 ಮತ್ತು ಪರಿಶಿಷ್ಟ ವರ್ಗಕ್ಕೆ 16 ಒಟ್ಟು 129 ಕೊಳವೆಬಾವಿಗಳನ್ನು 2005-06ನೇ ಸಾಲಿನಲ್ಲಿ ಕೊರೆದು ಪೂರ್ಣಗೊಳಿಸಲಾಗಿದೆ

2006-07ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿಗದಿ ಪಡಿಸಿದ ಪರಿಶಿಷ್ಟ ಜಾತಿಗೆ 105 ಮತ್ತು ಪರಿಶಿಷ್ಟ ವರ್ಗಕ್ಕೆ 12 ಕೊಳವೆ ಬಾವಿಗಳನ್ನು ಕೊರೆಯಲು ಈಗಾಗಲೇ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು, ಅದರಂತೆ ಕಾರ್ಯಪ್ರಗತಿಯಲ್ಲಿದೆ

ಆ) ದಿನಾಂಕ 31-03-07ಕ್ಕೆ ಅಂತ್ಯಗೊಳ್ಳಲಿರುವ ಆರ್ಥಿಕ ಸಾಲಿನಲ್ಲಿ ಎಲ್ಲಾ ಕೊಳವೆಬಾವಿಗಳನ್ನು ಕೊರೆದು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು ಅದರಂತೆ ಈ ಯೋಜನೆಯ ಬಗ್ಗೆ ಹೆಚ್ಚಿನ ಆದ್ಯತೆ ನೀಡಿ ಕೊಳವೆಬಾವಿಗಳನ್ನು ಕೊರೆದು ಪೂರ್ಣಗೊಳಿಸಲು ಜಿಲ್ಲಾ ವ್ಯವಸ್ಥಾಪಕರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ

ಇ) ಕೊಳವೆಬಾವಿ ಕೊರೆಯುವ ಕಾರ್ಯ ಪ್ರಗತಿಯಲ್ಲಿದ್ದು, ದಿನಾಂಕ 31-03-2007 ರೊಳಗೆ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ

660 (475) ಶ್ರೀ ವಿನಯ ಕುಲಕರ್ಣಿ (ಧಾರವಾಡ ಗ್ರಾಮೀಣ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಗ್ರಾಮೀಣ ಮತ ಕ್ಷೇತ್ರದಲ್ಲಿ ಮತ್ತು ಧಾರವಾಡ ಜಿಲ್ಲೆಯಲ್ಲಿ ಸ್ಥಳೀಯ ಜಾನುವಾರುಗಳ ತಳಿಗಳ ಅಭಿವೃದ್ಧಿ ಕಡೆಗೆ ಅಧಿಕಾರಿಗಳು ನಿರ್ಲಕ್ಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಸ್ಥಳೀಯ ಜಾನುವಾರುಗಳ ಅಭಿವೃದ್ಧಿಪಡಿಸುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೆ?